# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 27 |
| ವಿಧಾನ ಪರಿಷತ್‌ನ ಸದಸ್ಯರು | ಶ್ರೀ ಐವನ್ ಡಿ ಸೋಜಾ (ನಾಮ ನಿರ್ದೇಶನ ಹೊಂದಿರುವವರು) |
| ಉತ್ತರಿಸಬೇಕಾದ ದಿನಾಂಕ: | 09.07.2018 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ 2016-17 ಮತ್ತು 2017-18 ರಲ್ಲಿ ಒಟ್ಟು ಎಷ್ಟು ಗ್ರಾಮ ವಿಕಾಸ ಯೋಜನೆಯನ್ನು ಮಂಜೂರು ಮಾಡಲಾಗಿದೆ; ಈ ಯೋಜನೆಯ ಮಂಜೂರಾತಿಗೆ ಯಾವ ಮಾನದಂಡ ಒಟ್ಟುಕೊಳ್ಳಲಾಗಿದೆ: (ವಿವರ ಒದಗಿಸುವುದು) | • ಗ್ರಾಮವಿಕಾಸ ಯೋಜನೆಯನ್ನು 2015-16ನೇ ಸಾಲಿನಿಂದ ಜಾರಿಗೆ ತಂದಿದ್ದು, ಆಯ್ಕೆ ಮಾಡಿದ 939 ಗ್ರಾಮಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br>• 2016-17ನೇ ಸಾಲಿನಲ್ಲಿ ಗ್ರಾಮವಿಕಾಸ ಯೋಜನೆಯಡಿ ಯಾವುದೇ ಗ್ರಾಮಗಳನ್ನು ಆಯ್ಕೆ ಮಾಡಿರುವುದಿಲ್ಲ.<br>• 2017-18ನೇ ಸಾಲಿನಲ್ಲಿ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಇದುವರೆಗೆ ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು ಆಯ್ಕೆ ಮಾಡಿದ 963 ಗ್ರಾಮಗಳಿಗೆ ಅನುಮೋದನೆ ನೀಡಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.<br>• ಗ್ರಾಮವಿಕಾಸ ಮತ್ತು ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಗ್ರಾಮಗಳ ಆಯ್ಕೆಗಾಗಿ ಅನುಸರಿಸಿದ ಮಾನದಂಡಗಳ ವಿವರಗಳನ್ನು ಅನುಬಂಧ-3 & 4 ರಲ್ಲಿ ಲಗತ್ತಿಸಿದೆ. |
| ಆ | ಗ್ರಾಮ ವಿಕಾಸ ಯೋಜನೆ ಪೂರ್ತಿಗೊಳ್ಳಲು ಇಲಾಖೆ ವಿಧಿಸಿರುವ ಅವಧಿ ಎಷ್ಟು; ವಿಳಂಬ ಆಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು) | ಗ್ರಾಮವಿಕಾಸ ಯೋಜನೆಯು 2015-16ನೇ ಸಾಲಿನಿಂದ ಪ್ರಾರಂಭಿಸಿ, 2017-18ನೇ ಸಾಲಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು 3 ವರ್ಷಗಳ ಕಾಲಮಿತಿ ನಿಗಧಿಪಡಿಸಿರುತ್ತದೆ.<br>ನಿಗಧಿಪಡಿಸಿದ ಅವಧಿಯಲ್ಲಿ ಪೂರ್ಣಗೊಳ್ಳದಿರಲು ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>• ಗ್ರಾಮಗಳ ಆಯ್ಕೆಯಲ್ಲಿ ಆದ ವಿಳಂಭ ಮತ್ತು ಆಯ್ಕೆಯಾದ ಕೆಲವು ಗ್ರಾಮಗಳ ಬದಲಾವಣೆ ಮಾಡಬೇಕಾದ ಹಿನ್ನಲೆ ಹಾಗೂ<br>• ಪ್ರಥಮ ಬಾರಿಗೆ ರಾಜ್ಯ ವಲಯದ ಯೋಜನೆಯಾದ ಗ್ರಾಮವಿಕಾಸ ಯೋಜನೆಯ ಅನುಷ್ಠಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದ್ದರಿಂದ ಯೋಜನೆಯ ಪೂರ್ಣ ಮಾಹಿತಿಯನ್ನು ಅರಿತು ಕ್ರಿಯಾಯೋಜನೆಯನ್ನು ಅನುಮೋದನೆ ಮತ್ತು ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡುವಲ್ಲಿ ವಿಳಂಭವಾಗಿರುತ್ತದೆ.<br>ಈ ಕ್ರಮಗಳನ್ನು ಸರಿಪಡಿಸಿ ಯೋಜನೆಗೆ ನಿಗಧಿಪಡಿಸಿದ ರೂ.755.02ಕೋಟಿಗಳಿಗೆ ಪೈಕಿ ಈಗಾಗಲೇ ರೂ.694.85 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ಬಾಕಿ ಬೇಕಾಗಿರುವ ರೂ.60.17ಕೋಟಿಗಳನ್ನು ಈ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು. |

| | | |
|---|---|---|
| ಇ | ಸರ್ಕಾರದ ಮಂಜೂರಾದ ಕಾಮಗಾರಿ ಕೈಗೊಳ್ಳುವಾಗ ಪಂಚಾಯತ್‌ಗಳಿಂದ ನಿರಾಕ್ಷೇಪಣ ಪತ್ರ ಪಡೆಯಲೇ ಬೇಕೆನ್ನುವುದು ಕಡ್ಡಾಯವೇ; ಸರ್ಕಾರದ ಯೋಜನೆ ಜಾರಿಗೆ ತರಲು ಗ್ರಾಮ ಪಂಚಾಯತ್ ಸಹಕಾರ ನೀಡದೆ ಇದ್ದಲ್ಲಿ ಇಲಾಖೆ ಮುಂದಿರುವ ಕ್ರಮಗಳೇನು; (ವಿವರ ಒದಗಿಸುವುದು) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಮತ್ತು ಸಂಬಂಧಿಸಿದ ನಿಯಮಗಳಲ್ಲಿ ಸರ್ಕಾರದ ಮಂಜೂರಾದ ಕಾಮಗಾರಿ ಕೈಗೊಳ್ಳುವಾಗ ಗ್ರಾಮ ಪಂಚಾಯಿತಿಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕೆಂದು ನಿರ್ದಿಷ್ಟಪಡಿಸಿರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ಆದೇಶ/ಸುತ್ತೋಲೆಗಳನ್ನು ಹೊರಡಿಸಿರುವುದಿಲ್ಲ. |
| ಈ | 2015-16, 2016-17, 2017-18ರಲ್ಲಿ ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಮೀಸಲಿಟ್ಟ ಅನುದಾನ ಎಷ್ಟು; ಅನುದಾನ ಸಂಪೂರ್ಣವಾಗಿ ವಿನಿಯೋಗ ಆಗಿದೆಯೇ; ಆಗದೇ ಇದ್ದಲ್ಲಿ ಕಾರಣಗಳೇನು? (ವಿವರ ಒದಗಿಸುವುದು) | 2015-16, 2016-17, 2017-18 ರಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಯೋಜನೆ ಯಡಿಯಲ್ಲಿ ನಿಗಧಿಪಡಿಸಿದ ಅನುದಾನ, ಬಿಡುಗಡೆ, ವೆಚ್ಚ ಮತ್ತು ಬಾಕಿಯಿರುವ ಅನುದಾನದ ವಿವರಗಳನ್ನು ಈ ಕೆಳಗೆ ನೀಡಿದೆ. |

(ರೂ. ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಆರಂಭಿಕ ಶಿಲ್ಕು | ಹಂಚಿಕೆ | ಬಿಡುಗಡೆ | * ವೆಚ್ಚ | ಬಾಕಿ ** |
|---|---|---|---|---|---|
| 2015-16 | 122.39 | 1669.37 | 1928.28 | 1838.46 | 212.21 |
| 2016-17 | 212.21 | 2856.58 | 3049.42 | 2497.37 | 764.26 |
| 2017-18 | 764.26 | 2384.94 | 2477.84 | 2595.13 | 646.97 |

* ಆರಂಭಿಕ ಶಿಲ್ಕಿನ ಅನುದಾನವನ್ನು ಒಳಗೊಂಡಂತೆ ಅನುದಾನವನ್ನು ವಿನಿಯೋಗಿಸಲಾಗಿದೆ.

** ಆರ್ಥಿಕ ವರ್ಷದ ಅಂತ್ಯದಲ್ಲಿ ಅನುದಾನ ಬಿಡುಗಡೆಯಾದ ಕಾರಣ ಅನುದಾನ ಬಾಕಿ ಉಳಿದಿರುತ್ತದೆ. ಸದರಿ ಬಾಕಿ ಉಳಿದಿರುವ ಅನುದಾನವನ್ನು ಮುಂದಿನ ಸಾಲಿನಲ್ಲಿ ವಿನಿಯೋಗಿಸಲಾಗುತ್ತಿದೆ.

ನಂ. ಗ್ರಾಅಪ:23:ಗ್ರಾಖಿಯೋ:2018

(ಕೃಷ್ಣ ಭೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳ ಸಚಿವರು

# ಅನುಬಂಧ-1

## ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಸಂಖ್ಯೆ

| ಕ್ರ.ಸ | ಜಿಲ್ಲೆ | ಗ್ರಾಮೀಣ ವಿಧಾನಸಭಾ ಕ್ಷೇತ್ರ | ಗ್ರಾಮಗಳ ಸಂಖ್ಯೆ |
|---|---|---|---|
| 1 | ಬೆಳಗಾವಿ | 17 | 78 |
| 2 | ಬಾಗಲಕೋಟೆ | 7 | 34 |
| 3 | ಬಿಜಾಪುರ | 8 | 27 |
| 4 | ಗುಲಬರ್ಗಾ | 8 | 38 |
| 5 | ಬೀದರ್ | 6 | 25 |
| 6 | ರಾಯಚೂರು | 6 | 28 |
| 7 | ಕೊಪ್ಪಳ | 5 | 21 |
| 8 | ಗದಗ | 4 | 32 |
| 9 | ಧಾರವಾಡ | 4 | 23 |
| 10 | ಉತ್ತರ ಕನ್ನಡ | 6 | 38 |
| 11 | ಹಾವೇರಿ | 6 | 28 |
| 12 | ಬಳ್ಳಾರಿ | 8 | 33 |
| 13 | ಚಿತ್ರದುರ್ಗ | 6 | 30 |
| 14 | ದಾವಣಗೆರೆ | 8 | 37 |
| 15 | ಶಿವಮೊಗ್ಗ | 6 | 31 |
| 16 | ಉಡುಪಿ | 5 | 25 |
| 17 | ಚಿಕ್ಕಮಗಳೂರು | 5 | 28 |
| 18 | ತುಮಕೂರು | 10 | 53 |
| 19 | ಚಿಕ್ಕಬಳ್ಳಾಪುರ | 5 | 30 |
| 20 | ಕೋಲಾರ | 6 | 32 |
| 21 | ಬೆಂಗಳೂರು (ನ) | 6 | 24 |
| 22 | ಬೆಂಗಳೂರು (ಗ್ರಾ) | 4 | 20 |
| 23 | ರಾಮನಗರ | 4 | 21 |
| 24 | ಮಂಡ್ಯ | 7 | 36 |
| 25 | ಹಾಸನ | 7 | 38 |
| 26 | ದಕ್ಷಿಣ ಕನ್ನಡ | 7 | 37 |
| 27 | ಕೊಡಗು | 2 | 10 |
| 28 | ಮೈಸೂರು | 8 | 41 |
| 29 | ಚಾಮರಾಜನಗರ | 4 | 20 |
| 30 | ಯಾದಗಿರ್ | 4 | 21 |
| ಒಟ್ಟು | | 189 | 939 |

ಅನುಬಂಧ-2

## 2017-18ನೇ ಸಾಲಿನ ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಿಗೆ ಜಿಲ್ಲಾವಾರು ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸ | ಜಿಲ್ಲೆ | ವಿಧಾನ ಸಭಾ ಕ್ಷೇತ್ರಗಳ ಸಂಖ್ಯೆ | ನಿಗದಿ ಪಡಿಸಿರುವ ಗ್ರಾಮಗಳ ಸಂಖ್ಯೆ | ಈಗಾಗಲೇ ಸರ್ಕಾರದಿಂದ ಅನುಮೋದನೆ ಸಂಖ್ಯೆ | ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಗ್ರಾಮಗಳ ಸಂಖ್ಯೆ | ವಿವೇಚನೆಯಲ್ಲಿ ಆಯ್ಕೆ ಮಾಡಿದ ಗ್ರಾಮಗಳ ಸಂಖ್ಯೆ | ಒಟ್ಟು |
|---|---|---|---|---|---|---|---|
| 1. | ಬೆಳಗಾವಿ | 17 | 68 | 64 | 2 | 6 | 72 |
| 2 | ಬಾಗಲಕೋಟೆ | 7 | 30 | 30 | 3 | 1 | 34 |
| 3 | ಬಿಜಾಪುರ | 8 | 32 | 28 | 2 | 6 | 36 |
| 4 | ಗುಲಬರ್ಗಾ | 8 | 34 | 34 | 3 | 0 | 37 |
| 5 | ಬೀದರ್ | 6 | 24 | 24 | 2 | 5 | 31 |
| 6 | ರಾಯಚೂರು | 6 | 24 | 24 | 3 | 1 | 28 |
| 7 | ಕೊಪ್ಪಳ | 5 | 20 | 20 | 0 | 0 | 20 |
| 8 | ಗದಗ | 4 | 19 | 19 | 1 | 18 | 38 |
| 9 | ಧಾರವಾಡ | 4 | 19 | 19 | 2 | 1 | 22 |
| 10 | ಉತ್ತರ ಕನ್ನಡ | 6 | 33 | 33 | 1 | 1 | 35 |
| 11 | ಹಾವೇರಿ | 6 | 27 | 27 | 3 | 3 | 33 |
| 12 | ಬಳ್ಳಾರಿ | 8 | 34 | 34 | 2 | 0 | 36 |
| 13 | ಚಿತ್ರದುರ್ಗ | 6 | 26 | 26 | 3 | 2 | 31 |
| 14 | ದಾವಣಗೆರೆ | 8 | 33 | 33 | 4 | 1 | 38 |
| 15 | ಶಿವಮೊಗ್ಗ | 6 | 27 | 27 | 6 | 5 | 38 |
| 16 | ಉಡುಪಿ | 5 | 20 | 20 | 2 | 2 | 24 |
| 17 | ಚಿಕ್ಕಮಗಳೂರು | 5 | 23 | 23 | 2 | 2 | 27 |
| 18 | ತುಮಕೂರು | 10 | 44 | 44 | 5 | 7 | 56 |
| 19 | ಚಿಕ್ಕಬಳ್ಳಾಪುರ | 5 | 24 | 24 | 1 | 0 | 25 |
| 20 | ಕೋಲಾರ | 6 | 25 | 25 | 1 | 1 | 27 |
| 21 | ಬೆಂಗಳೂರು (ನ) | 6 | 24 | 24 | 9 | 2 | 35 |
| 22 | ಬೆಂಗಳೂರು (ಗ್ರಾ) | 4 | 18 | 18 | 0 | 2 | 20 |
| 23 | ರಾಮನಗರ | 4 | 16 | 16 | 6 | 6 | 28 |
| 24 | ಮಂಡ್ಯ | 7 | 31 | 30 | 4 | 0 | 34 |
| 25 | ಹಾಸನ | 7 | 32 | 32 | 1 | 1 | 34 |
| 26 | ದಕ್ಷಿಣ ಕನ್ನಡ | 7 | 29 | 29 | 1 | 2 | 32 |
| 27 | ಕೊಡಗು | 2 | 10 | 10 | 2 | 0 | 12 |
| 28 | ಮೈಸೂರು | 8 | 32 | 32 | 1 | 11 | 44 |
| 29 | ಚಾಮರಾಜನಗರ | 4 | 19 | 19 | 1 | 0 | 20 |
| 30 | ಯಾದಗಿರ್ | 4 | 16 | 16 | 0 | 0 | 16 |
| | ಒಟ್ಟು | 189 | 813 | 804 | 73 | 86 | 963 |

# ಅನುಬಂಧ-3

## ಗ್ರಾಮವಿಕಾಸ ಯೋಜನೆಯಡಿ ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳು

- ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ ಗರಿಷ್ಠ ಜನ ಸಂಖ್ಯೆಯನ್ನು ಆಧರಿಸಿ ಗರಿಷ್ಠ ಗ್ರಾಮಗಳನ್ನು ಸ್ಥಳೀಯ ಶಾಸಕರು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಿ ಅವರುಗಳಿಂದ ಆ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆಯುವುದು.

- ಶಾಸಕರು ಆಯ್ಕೆ ಮಾಡಿ ನೀಡಿದ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವುದು.

- ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡುವುದು. ವಿಶೇಷ ಸಂದರ್ಭದಲ್ಲಿ ನಿಗದಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ, 5000 ಜನಸಂಖ್ಯೆಯನ್ನು ಮೀರಿದ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡುವಾಗಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಕನಿಷ್ಟ 2 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು.

- ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಗಳಿಂದಾಗಿ 5 ಕ್ಕಿಂತ ಕಡಿಮೆ ಇರುವ ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯುಳ್ಳ ಗ್ರಾಮಗಳನ್ನು ಆಯ್ಕೆ ಮಾಡುವುದು.

- ಆಯ್ಕೆ ಮಾಡುವ ಗ್ರಾಮಗಳು ಈ ಹಿಂದೆ ಯಾವುದೇ ಯೋಜನೆಯಲ್ಲಿ ಆಯ್ಕೆಯಾಗಿರಬಾರದು. ಉದಾ : ಸುವರ್ಣ ಗ್ರಾಮೋದಯ, ಸುಗ್ರಾಮ – ಸುಗ್ರಾಮ, ಸ್ವಚ್ಛ ಗ್ರಾಮ ಇತ್ಯಾದಿ.,

- ಐದು ಗ್ರಾಮಗಳಿಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಬಾರದು. ನಿಗಧಿಪಡಿಸಿದ 5000 ಜನಸಂಖ್ಯೆಯುಳ್ಳ ಗ್ರಾಮಗಳಿಗಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಒಂದೇ ಗ್ರಾಮವನ್ನು ಆಯ್ಕೆ ಮಾಡಿದಾಗ ಗ್ರಾಮೀಣ ಮತಕ್ಷೇತ್ರಕ್ಕೆ ನಿಗಧಿಪಡಿಸಿದ ರೂ.3.75 ಕೋಟಿಗಳ ಅನುದಾನವನ್ನು ಮಾತ್ರ ನೀಡಲಾಗುವುದು. ಇದಕ್ಕಾಗಿ ಹೆಚ್ಚಿನ ಅನುದಾನವನ್ನು ನೀಡಲಾಗುವುದಿಲ್ಲ.

- ಸಂಪೂರ್ಣ 2 ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿದ ಗರಿಷ್ಠ 8000 ಜನಸಂಖ್ಯೆಯುಳ್ಳ ಗರಿಷ್ಠ 8 ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಎಸ್‌ಸಿ ಮತ್ತು ಎಸ್‌ಟಿ ಜನಸಾಂದ್ರತೆಯುಳ್ಳ ಕನಿಷ್ಠ 3 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು. ಗರಿಷ್ಠ 8000 ಜನ ಸಂಖ್ಯೆಯನ್ನು ಮೀರಿದ 8 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವನ್ನು ರೂ. 6.00 ಕೋಟಿಗೆ ಸೀಮಿತಗೊಳಿಸಲಾಗುವುದು.

- ಗ್ರಾಮದ ಅಭಿವೃದ್ಧಿಗಾಗಿ ಆದ್ಯತೆಯನ್ನಾಧರಿಸಿ ಗ್ರಾಮಾಭಿವೃದ್ಧಿ ಯೋಜನೆ ತಯಾರಿಸಲು ಗ್ರಾಮ ಪಂಚಾಯತ್‌ಗಳಿಗೆ ಸಲಹೆ, ಮಾರ್ಗದರ್ಶನಗಳನ್ನು ನೀಡುವುದು. ಅಲ್ಲದೆ, ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಗ್ರಾಮ ಸಮುದಾಯವು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಪ್ರೇರೇಪಿಸುವುದು ಹಾಗೂ ಭಾಗವಹಿಸುವುದು.

- ಅಭಿವೃದ್ಧಿಯ ಅನುಷ್ಠಾನದಲ್ಲಿ ಉತ್ತಮ ಪರಿಣಾಮಕಾರಿ ಫಲಿತಾಂಶವನ್ನು ಪಡೆಯುವ ಸಲುವಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಪರಾಮರ್ಶೆಗಾಗಿ ಗ್ರಾಮದಲ್ಲಿ ಕಾಲಕಾಲಕ್ಕೆ ಸಭೆಗಳನ್ನು ಏರ್ಪಡಿಸಲು ಪಂಚಾಯತ್‌ಗಳಿಗೆ ಸೂಚಿಸುವುದು ಮತ್ತು ಪಾಲ್ಗೊಳ್ಳುವುದು.

- ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊರತೆಯಾಗಬಹುದಾದ ಅನುದಾನವನ್ನು ತಮ್ಮ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ನೀಡುವುದು, ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ಖಾಸಗಿ ನಿಗಮಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು.

- ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು.

## ಅನುಬಂಧ-4

## ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಗ್ರಾಮಗಳನ್ನು ಆಯ್ಕೆ ಮಾಡಲು ಮಾನದಂಡಗಳು

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳು ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯಾ ವಿಧಾನಸಭಾ ಕ್ಷೇತ್ರಕ್ಕೆ/ವಿಧಾನ ಪರಿಷತ್‌ಸದಸ್ಯರಿಗೆ ಗ್ರಾಮಗಳನ್ನು ಆಯ್ಕೆ ಮಾಡಲು ನಿಗಧಿಪಡಿಸಿರುವ ಸಂಖ್ಯೆ/ಅನುದಾನದ ವಿವರಗಳನ್ನು ಸಂಬಂಧಪಟ್ಟ ವಿಧಾನಸಭಾ ಸದಸ್ಯರಿಗೆ/ವಿಧಾನ ಪರಿಷತ್‌ಸದಸ್ಯರಿಗೆ ನೀಡುವುದು.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳು ಈ ಹಿಂದೆ ವಿವಿಧ ಯೋಜನೆಗಳಡಿಯಲ್ಲಿ ಆಯ್ಕೆಯಾಗಿ ಈಗಾಗಲೇ ಅಭಿವೃದ್ಧಿ ಹೊಂದಿರುವ ಗ್ರಾಮಗಳ ಪಟ್ಟಿಯನ್ನು ಮತ್ತು ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳ ಪಟ್ಟಿಯನ್ನು ಮಾನ್ಯ ವಿಧಾನಸಭಾ ಸದಸ್ಯರಿಗೆ/ವಿಧಾನಪರಿಷತ್ ಸದಸ್ಯರಿಗೆ ನೀಡಿ ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳನ್ನು ಆಯ್ಕೆ ಮಡಲು ಸೂಚಿಸುವ ಹಾಗೂ ಹಿಂದಿನ ಸಾಲುಗಳ ಯಾವುದಾದರೂ ಯೋಜನೆಗಳಲ್ಲಿ ಆಯ್ಕೆಯಾಗಿ ಅನುದಾನ ಕಡಿಮೆ ಹಂಚಿಕೆಯಾಗಿ ಅಭಿವೃದ್ಧಿಯಲ್ಲಿ ವಂಚಿತವಾಗಿರುವ ಗ್ರಾಮಗಳನ್ನು ಆಯ್ಕೆ ಮಾಡಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುದಾನದ ಕೊರತೆಯಿಂದ ಸದರಿ ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಪೂರ್ಣಗೊಂಡಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಂಡು ಆಯ್ಕೆ ಮಾಡಬಹುದು. ಹೀಗೆ ಆಯ್ಕೆ ಮಾಡುವಾಗಲೂ ಆಯಾ ವಿಧಾನಸಭಾ ಕ್ಷೇತ್ರಗಳಿಗೆ ನಿಗಧಿಪಡಿಸಿರುವ ಗ್ರಾಮಗಳ ಸಂಖ್ಯೆಯ ಮಿತಿಯೊಳಗೆ ಶಿಫಾರಸ್ಸು ಮಾಡುವುದು.
- ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಾಂದ್ರತೆಯಿರುವ ಗ್ರಾಮಗಳ ಪಟ್ಟಿಗಳನ್ನು ಸಹ ಒದಗಿಸಿ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆಯಲು ಕ್ರಮ ಕೈಗೊಳ್ಳುವುದು.
- ಗ್ರಾಮೀಣ ವಿಧಾನಸಭಾ ಸದಸ್ಯರು ನಿಗಧಿಪಡಿಸಿದ ಸಂಖ್ಯೆಯಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗರಿಷ್ಠ ಪರಿಶಿಷ್ಟ ಜಾತಿ ಇರುವ ಒಂದು ಗ್ರಾಮವನ್ನು ಮತ್ತು
- ಗರಿಷ್ಠ ಪರಿಶಿಷ್ಟ ಪಂಗಡದ ಜನಸಂಖ್ಯೆ ಹೊಂದಿರುವ ಒಂದು ಗ್ರಾಮವನ್ನು ಸೇರಿ ನಿಗಧಿಪಡಿಸಿದ ಸಂಖ್ಯೆಯಷ್ಟು ಮಿತಿಯೊಳಗೆ ಗ್ರಾಮಗಳನ್ನು ಆಯ್ಕೆ ಮಾಡಲು ಸೂಚಿಸುವುದು.

- ವಿಧಾನಪರಿಷತ್ ಸದ್ಯಸರು ರಾಜ್ಯದ ಗ್ರಾಮೀಣ ಭಾಗದ ತಾವು ಇಚ್ಛಿಸುವ ಯಾವುದೇ ಒಂದು ಗ್ರಾಮವನ್ನು ಆಯ್ಕೆ ಮಾಡುವಾಗ ಆ ಗ್ರಾಮದಲ್ಲಿ ಇತರೆ ಜನಾಂಗವು ಸೇರಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯಿರುವ ಒಂದು ಗ್ರಾಮವನ್ನು ಆಯ್ಕೆ ಮಾಡುವುದು.
- ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾದ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಿ ಶಿಫಾರಸ್ಸು ಮಾಡಬಾರದು. ಒಂದು ವೇಳೆ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಿದಲ್ಲಿ ನಿಗಧಿಪಡಿಸಲಾದ ಗರಿಷ್ಠ ಸಂಖ್ಯೆಯ ಗ್ರಾಮಗಳನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ಹೆಚ್ಚಿನಯಾವುದೇ ಅನುದಾನವನ್ನು ನೀಡಲು ಅವಕಾಶವಿರುವುದಿಲ್ಲ.
- ಒಂದೊಮ್ಮೆ ನಿಗಧಿಪಡಿಸಿದ ಗರಿಷ್ಠ ಗ್ರಾಮಗಳ ಬದಲಾಗಿ ಕಡಿಮೆ ಸಂಖ್ಯೆಯ ಗ್ರಾಮಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಆಯಾ ವಿಧಾನಸಭಾ ಕ್ಷೇತ್ರಗಳಿಗೆ ನಿಗಧಿಪಡಿಸಿದ ಗರಿಷ್ಠ ಅನುದಾನವನ್ನು ನೀಡಲಾಗುವುದು.
- ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಗ್ರಾಮಗಳ ಆಯೆ ಮಾಡಿ ಸರ್ಕಾರದ ಅನುಮೋದನೆ ಪಡೆದ ನಂತರ ಗ್ರಾಮಗಳ ಬದಲಾವಣೆಗೆ ಅವಕಾಶ ಕಲ್ಪಿಸಿರುವುದಿಲ್ಲ.
- ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಇತರೆ ಯೋಜನೆಗಳಡಿ ಈಗಾಗಲೇ ಆಯ್ಕೆಗೊಂಡ ಗ್ರಾಮಗಳು ಪುನರಾವರ್ತನೆಯಾಗದಂತೆ ಗಮನವಿರಿಸುವುದು.
- ನಿಗಧಿ ಪಡಿಸಿದಂತೆ ಗ್ರಾಮಗಳ ಆಯ್ಕೆ ಮಾಡಿರುವ ಕುರಿತು ಪರಿಶೀಲಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆ ಪಡೆಯುವಾಗ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಗ್ರಾಮಗಳ ಪಟ್ಟಿಯಲ್ಲಿ ಬದಲಾಣೆ/ಸೇರ್ಪಡೆ ಮಾಡುವಾಗ ಸಂಬಂಧಪಟ್ಟ ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರ ಸಹಮತಿ ಪಡೆಯುವುದು.
- ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ನಿಗಧಿಪಡಿಸಿದ ಹಾಗೂ ಮಾರ್ಗಸೂಚಿಯ ಮಾನದಂಡಗಳಿಗೆ ಅನುಗುಣವಾಗಿ ಗ್ರಾಮಗಳನ್ನು ಆಯ್ಕೆ ಮಾಡಲು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಶಿಫಾರಸ್ಸು ಮಾಡಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಮಾಹಿತಿ/ಮಾರ್ಗದರ್ಶನ ನೀಡಿ ಜರೂರಾಗಿ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವುದು.